**28ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ**

**ಸಿ.ಸಿ: 18630/2024 DW-2**

| | |
|---|---|
| ಸಾಕ್ಷಿದಾರರ ಹೆಸರು | ಅನಿಲ್ ಕುಮಾರ್ |
| ತಂದೆಯ ಹೆಸರು | ಮರಿಬಸಪ್ಪ |
| ವಯಸ್ಸು | 61 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ವಿದ್ಯಾರಣ್ಯಪುರ, ಬೆಂಗಳೂರು |
| ದಿನಾಂಕ | 14/07/2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು |

**ಮುಖ್ಯ ವಿಚಾರಣೆ: ಆರೋಪಿ ಪರ ಶ್ರೀ YBK ವಕೀಲರಿಂದ:**

ಈ ದಿನ ನ್ಯಾಯಾಲಯಕ್ಕೆ ಸಮನ್ಸ್‌ನ ಆಧಾರದ ಮೇಲೆ ಸಾಕ್ಷಿ ನುಡಿಯಲು ಹಾಜರಾಗಿರುತ್ತೇನೆ. ನನಗೆ ಪ್ರಸ್ತುತ ಪ್ರಕರಣದ ಪಿರ್ಯಾದಿದಾರರಾಗಲೀ ಅಥವಾ ಆರೋಪಿಯಾಗಲೀ ಪರಿಚಯ ಇರುವುದಿಲ್ಲ. ನನಗೆ ಪ್ರಸ್ತುತ ಪ್ರಕರಣದ ಸಂಗತಿಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ನಾನು ಆರೋಪಿಗೆ ನಿಡಿ.1 ರಂತೆ ಯಾವುದೇ ರಸೀದಿಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲು: ಆರೋಪಿ ಪರ ಶ್ರೀ YBK ವಕೀಲರಿಂದ:**

ನಾನು 2021 ನೇ ಇಸವಿಯಲ್ಲಿ ಪಿರ್ಯಾದಿದಾರರಾದ Evantha Builders ರವರ ಕಂಪನಿಯಲ್ಲಿ ಮ್ಯಾನೇಜರ್ ಎಂದು ಕೆಲಸ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು Evantha Builders ರವರ ಹತ್ತಿರ ಮ್ಯಾನೇಜರ್ ಎಂದು ಕೆಲಸ ಮಾಡಿದ್ದರೂ ಸಹ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಡಿ.1 ನ್ನು ತೋರಿಸಿ ಅದರಲ್ಲಿರುವ ಬರವಣಿಗೆ ನಿಮ್ಮದೇ ಇರುತ್ತದೆ ಎಂದು ಕೇಳಲಾಗಿ ಸಾಕ್ಷಿಯು ಅಲ್ಲ ಎಂದು ನುಡಿದಿರುತ್ತಾರೆ. ದಿ.05/06/2021 ರಂದು

ಆರೋಪಿಯಿಂದ ನಾನು ರೂ.9,30,000/- ಗಳನ್ನು ಪಡೆದುಕೊಂಡು ಆರೋಪಿಗೆ ನಿಡಿ.1 ರಂತೆ ರಸೀದಿಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ನಾನು ಆರೋಪಿಯಿಂದ ರೂ.11,80,000/- ಗಳನ್ನು ಸಹ ನಗದು ರೂಪದಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ದಿ.21/06/2021 ರಂದು ಆರೋಪಿಯಿಂದ ರೂ.8,90,000/- ಗಳನ್ನು ನಗದು ರೂಪದಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.1 ಕ್ಕೆ ನಾನು ಎರಡು ಬಾರಿ ನನ್ನ ಸಹಿಗಳನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಡಿ.1 ರಲ್ಲಿರುವ ಸಹಿಗಳು ನಿಮ್ಮವೇ ಇರುತ್ತವೆ ಎಂದು ತೋರಿಸಲು ನಿಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ Specimen Signatures ಗಳನ್ನು ಮತ್ತು ನಿಡಿ.1 ರಲ್ಲಿ ಇರುವ ಸಹಿಗಳನ್ನು ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲು ನಿಮಗೆ ಯಾವುದೇ ಅಭ್ಯಂತರ ಇದೆಯೇ ಎಂದು ಕೇಳಲಾಗಿ ಸಾಕ್ಷಿಯು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಇರುವ ಬರವಣಿಗೆಯನ್ನು ಮತ್ತು ನನ್ನ ಬರವಣಿಗೆ ಇರುವ ದಾಖಲೆಯನ್ನು ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಲು ನಿಮಗೆ ಯಾವುದೇ ಅಭ್ಯಂತರ ಇದೆಯೇ ಎಂದು ಕೇಳಲಾಗಿ ಸಾಕ್ಷಿಯು ನನಗೆ ಯಾವುದೇ ಅಭ್ಯಂತರ ಇರುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ.1 ರಲ್ಲಿ ಇರುವ ಬರವಣಿಗೆ ಮತ್ತು ಸಹಿಗಳು ನನ್ನವೇ ಇದ್ದರೂ ಸಹ ಈಗ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.1 ರಂತೆ ನಾನು ಆರೋಪಿಗೆ ರಸೀದಿಯನ್ನು ನೀಡಿದ್ದರೂ ಸಹ ಈ ದಿನ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ನನ್ನ ವಿರುದ್ಧ ವಿ.ವಿ ಪುರಂ ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದು ಪೊಲೀಸರು ನನ್ನನ್ನು ವಿಚಾರಣೆಗೆ ಕರೆದರು ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ RBL ವಕೀಲರಿಂದಃ**

ಪಿರ್ಯಾದುದಾರರ ಪರ ವಕೀಲರು ಹಾಜರಿದ್ದು ಪಾಟೀ ಸವಾಲು ಏನೂ ಇರುವುದಿಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**28ನೇ ಅ ಮು ನ್ಯಾ ದಂ, ಬೆಂ ನಗರ**